ಅ) ಮಲೆನಾಡಿನಲ್ಲಿ ರೈತರ ಉಪಯೋಗಕ್ಕೆ ಇರುವ "ಬೆಟ್ಟ" ಜಾಗದಲ್ಲಿ ರೈತರಿಗೆ ಹಕ್ಕು ನೀಡಲು ಸರ್ಕಾರಕ್ಕಿರುವ ತೊಂದರೆಯೇನು?

ಇ) ಇದರ ಬಗ್ಗೆ ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಈ) ಬೆಟ್ಟವನ್ನು ರೈತರಿಗೆ ನೀಡಲು ಸಮಿತಿ ಮಾಡಿದ್ದು ವರದಿ ಯಾವಾಗ ನೀಡುತ್ತದೆ?

ಶ್ರೀ. ರಮೇಶ್. ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಸದರಿ ವಿಷಯವು ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಇರುತ್ತದೆ.

ಆ) ಸಚಿವ ಸಂಪುಟ ಉಪಸಮಿತಿಯಿಂದ ಶಿಫಾರಸ್ಸುಗಳನ್ನು ಸ್ವೀಕರಿಸಿದ ನಂತರ ಅದರಂತೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಮತ್ತು ಈ) ಸಚಿವ ಸಂಪುಟ ಉಪ ಸಮಿತಿಯಿಂದ ಶಿಫಾರಸ್ಸುಗಗಳನ್ನು ಸ್ವೀಕರಿಸಿದ ನಂತರ ಅದರಂತೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ವಾಹನ ಅಪಘಾತಕ್ಕೆ ಸಂಬಂಧಪಟ್ಟಂತೆ ನೀಡಿದ ಪರಿಹಾರಧನ.

858 - ಶ್ರೀರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995 ರಿಂದ1998ರ ಕೊನೆ ಡಿಸೆಂಬರ್‌ವರಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಪಘಾತದಲ್ಲಿ ಮೃತಪಟ್ಟ ಕುಟುಂಬಗಳಿಗೆ ಹಾಗೂ ಗಾಯಗೊಂಡವರಿಗೆ ವಿವಿಧ ಕೋರ್ಟ್‌ಗಳ ಆದೇಶದ ಮೇರೆಗೆ ನೀಡಿದ ಪರಿಹಾರ ಧನ ಎಷ್ಟು?

ಆ) ಮೇಲ್ಕಂಡ ಅವಧಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್‌ಗಳಿಂದ ಅಪಘಾತಕ್ಕೊಳಗಾಗಿ ಮೃತಪಟ್ಟವರ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು) :

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೂ ಅಪಘಾತದಲ್ಲಿ ಮೃತಪಟ್ಟು ಕುಟುಂಬಗಳಿಗೆ ಹಾಗೂ ಗಾಯಗೊಂಡವರಿಗೆ ವಿವಿಧ ಕೋರ್ಟುಗಳ ಆದೇಶದ ಮೇರೆಗೆ 1995 ರಿಂದ 1996 ಡಿಸೆಂಬರ್‌ಗೆ ಪರಿಹಾರ ಧನವಾಗಿ ರೂ.15,29,03,408 ಗಳನ್ನು ನೀಡಿರುತ್ತದೆ.

ಆ) ಮೇಲ್ಕಂಡ ಅವಧಿಯಲ್ಲಿ ಸಾರಿಗೆ ಬಸ್‌ಗಳಿಂದ ಅಪಘಾತಕ್ಕೊಳಗಾದ 1006 ವ್ಯಕ್ತಿಗಳು ಮೃತ ಹೊಂದಿ 9548 ವ್ಯಕ್ತಿಗಳು ಗಾಯಗೊಂಡಿರುತ್ತಾರೆ.